ಶಿರೀನ್‌ಗೆ ಗೌರಿ, ಬಾಳಣ್ಣನತ್ತ ನೋಡುವ ಧೈರ್ಯವಾಗಲಿಲ್ಲ. ಮುಖ ಎತ್ತಲೂ ಆಗಲಿಲ್ಲ. ಅವಳಿಗೆ ತನ್ನ ಅಸಹಾಯಕತೆಗೆ ಅಲ್ಲಲ್ಲ... ಹೇಡಿತನಕ್ಕೆ ತನ್ನ ಮೇಲೇ ಅಸಹ್ಯವಾಗತೊಡಗಿತು. ಕಣ್ಣುಗಳಿಂದ ನೀರು ದಳದಳ ಇಳಿಯತೊಡಗಿತು. ಮುಖ ಹುದುಗಿಸಿ ಬಿಕ್ಕತೊಡಗಿದಳು. ಆವರಿಸಿದ್ದ ಮೌನದಲ್ಲಿ ಅವಳ ಬಿಕ್ಕುಗಳು ಸಂಕಟದಿಂದ ಜಾರತೊಡಗಿದವು.

ಯಾವಾಗಲೊ ಹಿಂದೆ ಬಂದು ನಿಂತಿದ್ದ ಶಿಶಿರ ಭರವಸೆ ನೀಡುವಂತೆ ಅವಳ ಭುಜ ಒತ್ತಿದ. ಶಿರೀನ್ ಆತನತ್ತ ನೋಡಿದ್ದರೆ, ಅವಮಾನ, ಸಿಟ್ಟಿನಿಂದ ಕೆಂಪಾದ ಮುಖ ಕಾಣುತ್ತಿತ್ತು. ಒಂದು ನಿರ್ಧಾರಕ್ಕೆ ಬಂದು, ಶಿಶಿರ ಕೋಣೆಯ ಮುಚ್ಚಿದ ಬಾಗಿಲಿನತ್ತ ನಡೆದ. ಅಪ್ಪನನ್ನು ಕೋಣೆಯಿಂದ ಹೊರಗೆ ತಂದು ನಿಲ್ಲಿಸಿದ. ತಲೆ ತಗ್ಗಿಸಿ ನಿಂತ ಅಪ್ಪನತ್ತ ತಿರಸ್ಕಾರದಿಂದ ನೋಡಿ, ಬಾಳಣ್ಣನತ್ತ ತಿರುಗುತ್ತ, 'ಬಾಳಣ್ಣಾ, ನನ್ನ ಕ್ಷಮಾ ಮಾಡ್ರಿ. ನಿಮ್ಮ ಮಗಳ್ನ ಸುರಕ್ಷಿತ ಇಡಲಿಲ್ಲ ನಾನು. ಇನ್‌ಸ್ಪೆಕ್ಟರ್ ಬರೂತನಕಾ ನೀವು ಏನ ಮಾಡತೀರಿ ಮಾಡ್ರಿ. ನಿಮ್ಮ ಅಪರಾಧಿನ್ನ ಮುಂದ ತಂದ ನಿಂದರ್ಸೇನಿ' ಎನ್ನುತ್ತ ಮೊಬೈಲ್ ಬಿರಡೆಗಳನ್ನೊತ್ತತೊಡಗಿದ. ಬಾಳಣ್ಣ ಅವನನ್ನು ತಡೆಯುತ್ತ, 'ಸಿಟ್ಟಿನ್ಯಾಗ ಏನರ ಮಾಡಬ್ಯಾಡ್ರಿ. ನಾವು ಗೌರಿನ್ನ ಕರಕೊಂಡು ಊರಿಗೆ ಹೋಕ್ಕೇವಿ. ಆ ದೇವ್ರ ದಯದಿಂದ ಆಗಬಾರ್ದು ಅನ್ನೂ ಅಂತಾದ್ದೇನೂ ಆಗಿಲ್ಲ. ಇದನ್ನ ಸುಮ್ನ ಬೆಳ್ಸೂದ ಬ್ಯಾಡಾ... ಏನಂದ್ರೂ ನಿಮ್ಮ ಅಪ್ಪಾರು...' ಎಂದ.

ಶಿಶಿರ, 'ಇಲ್ಲ ಬಾಳಣ್ಣಾ, ಈ ಕೆಲಸಾ ನಾ ಭಾಳ ಮದಲ ಮಾಡ್ಬೇಕಾಗಿತ್ತು. ಇವನ ಈ ಹೊಲಸ ಚಾಳಿಯಿಂದನ ನನ್ನ ಅವ್ವಾ ಕೊರಗಿ ಕೊರಗಿ ಸತ್ಲು. ಮದ್ಲ ಧೈರ್ಯಾ ಇದ್ದಿದ್ದಿಲ್ಲಾ. ಅವ್ವ ಹೋದ ಮ್ಯಾಲ, ಊರಾಗ ತನ್ನಷ್ಟಕ್ಕ ತಾ ಇರಕೋವಲ್ಯಾಕ... ಏನಂದ್ರೂ ನನ್ನ ಹಡದಾಂವಾ ಅಂತ ಅನಕೊಂಡು ಸುಮ್ನಿದ್ದೆ. ಇಂಥಾವಾ ನನ್ನ ಅಪ್ಪ ಅಂತ ಹೇಳಿಕೋಳಿಕ್ಕೂ ನಾಚ್ಕಿ ಆಗ್ತದ. ಆದರ, ನನ್ನ ಮನ್ಯಾಗಿದ್ದು, ಸಣ್ಣ ಹುಡಗಿ ಗೌರಿ ಮ್ಯಾಲೆ ಕಣ್ಣ ಹಾಕತಾನ ಅಂತ ನಾ ಅನಕೊಂಡಿದ್ದಿಲ್ಲ. ಇಂಥವ್ರು ಇದ್ದಲ್ಲೆ, ಹೆಂಗ್ಸೂರು ಸುರಕ್ಷಿತ ಇರೂದುಲ್ಲಾ. ಸಮಾಜದಾಗ ಇರಲಿಕ್ಕೆ ಯೋಗ್ಯ ಅಲ್ಲ ಇವ್ರು. ಈಗ ಈ ಮನಿಯಿಂದ ಗೌರಿ ಹೊರಗ ಹೋಗಬೇಕಾಗಿಲ್ಲ. ಹೋಗಬೇಕಾಗಿದ್ದು ನನ್ನ ಈ ಅಪ್ಪ... ಜೇಲಿಗೆ... ನಾನ ಕಂಪ್ಲೇಂಟ್ ಕೊಡತೇನಿ...' ಎನ್ನುತ್ತ, ಎಲ್ಲರೂ ಅಚ್ಚರಿಯಿಂದ ನೋಡುತ್ತಿದ್ದಂತೆ, ಆತ ಮೊಬೈಲ್ ಬಿರಡೆಗಳನ್ನೊತ್ತಿದ.

ಶಿಶಿರನ ವ್ಯಕ್ತಿತ್ವದ ಮತ್ತೊಂದು ಮುಖವನ್ನು ಕಂಡು ಶಿರೀನ್ ದಂಗುಬಡಿದು ನೋಡತೊಡಗಿದಳು. ಹತ್ತಿರ ಬಂದು ಕಣ್ಣೊರಸಿದ ಗೌರಿಯನ್ನು ಎದೆಗಪ್ಪಿಕೊಂಡಳು. ತನ್ನ ಗಂಡ ತನ್ನ ಜೊತೆಗಿದ್ದರೆ ಇಡೀ ಜಗತ್ತನ್ನೇ ಎದುರಿಸಬಹುದೆನಿಸಿ ಅವಳ ಮನಸ್ಸು ಹಗುರಾಯಿತು.


## ಶ್ವೇತಾ ನರಗುಂದ

ಪ್ರಾಣಿಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಪ್ರಸ್ತುತ ಬೆಳಗಾವಿಯಲ್ಲಿ ನೆಲೆಸಿದ್ದಾರೆ. ನಾಲ್ಕು ಕವನ ಸಂಕಲನಗಳು, (ಹೇಮಗರ್ಭಾ, ಕಿಂಕಿಣಿ, ಶೈವಾಲ, ತಲಲಂಪಂಪಂ), ಎರಡು ಕಥಾಸಂಕಲನಗಳು (ಕಾತ್ಯಾಯಿನಿ ಅಮ್ಮನೂ ವೇಲು ಪಕ್ಷಿಯೂ, ಗಾಜಿನ ಮನೆ), ಕಾದಂಬರಿ (ವಿಮುಖಿ), ಎರಡು ಪ್ರವಾಸ ಕಥನಗಳು (ನೀವೂ ಒಮ್ಮೆ ಕಂಡು ಬನ್ನಿ ಮಾರಿಷಸ್, ಕಿವೀಗಳ ನಾಡಿನಲ್ಲೊಂದು ದಾರಿ ಪ್ರವಾಸ), ವ್ಯಕ್ತಿ ಚಿತ್ರ (ಶ್ರೀ ಮಹಾದೇವಪ್ಪ ಪಟ್ಟಣ), ಆರೋಗ್ಯ (ಮಗುವಿರಲಿ ಮನೆಯಲ್ಲಿ ನಗುವಿರಲಿ ಮನದಲ್ಲಿ), ಸಂಪಾದಿತ ಕವನ ಸಂಕಲನ (ಕಾವ್ಯ ಕುಂದಣ) ಪ್ರಕಟವಾಗಿವೆ.